S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 65/2022

**ಚಾ.ಸಾ.–6 ಫ್ರಾ.ಸಾ.–6**

| | |
|---|---|
| **ಸಾಕ್ಷಿದಾರರ ಹೆಸರು** | **ಡಾಃ ರವಿಕುಮಾರ್ ಕೆ ಎನ್** |
| **ತಂದೆಯ/ಗಂಡನ ಹೆಸರು** | **ಕೆ.ಎಸ್ ನಾರಾಯಣ** |
| **ವಯಸ್ಸು** | **60 ವರ್ಷಗಳು** |
| **ಉದ್ಯೋಗ** | **ನಿವೃತ್ತ ವೈಧ್ಯರು** |
| **ವಾಸ** | **ಮೈಸೂರು** |

**ದಿನಾಂಕಃ 24–08–2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾನು 2016 ಸೆಪ್ಟೆಂಬರ್ ರಿಂದ 2025 ಅಕ್ಟೋಬರ್ ವರೆಗೆ ಪಾಂಡವಪುರದಲ್ಲಿ ವೈಧ್ಯರಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿದ್ದೇನೆ.

2) ದಿನಾಂಕ 01–12–2021 ರಂದು ಸಂಜೆ 5 ಗಂಟೆ ಸಮಯದಲ್ಲಿ ಜ್ಯೋತಿ ಕೋಂ ಬಾಲಕೃಷ್ಣ ಎಂಬ 37 ವರ್ಷದ ಮಹಿಳೆ ಚೇತನ್ ಎಂಬುವವರಿಂದ ಹಲ್ಲೆಗೊಳಗಾದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದಾರೆ . ಅವರಿಗೆ 30–11–2021 ರಂದು ಬೆಳಗ್ಗೆ 7–00 ಗಂಟೆ ಸಮಯದಲ್ಲಿ ಕೈ ಮತ್ತು ಕಲ್ಲಿನಿಂದ ಹಲ್ಲೆಯಾದ ಬಗ್ಗೆ ಹೇಳಿರುತ್ತಾರೆ.

ಅವರನ್ನು ಪರಿಕ್ಷಿಸಿದಾಗ ಅವರ ಮೈಕೈನಲ್ಲಿ ನೋವು ಇದೆ ಎಂದು ಹೇಳಿರುತ್ತಾರೆ. ಅವರ ಮೈಮೇಲೆ ಯಾವುದೇ ಗಾಯಗಳು ಕಂಡು ಬಂದಿಲ್ಲ. ನಾನು ಪ್ರಥಮ ಚಿಕಿತ್ಸೆ ಕೊಟ್ಟಿದ್ದೇನೆ. ನೋವು ಕಡಿಮೆಯಾಗದಿದ್ದರೆ ಕೀಲು ಮತ್ತು ಮೂಳೆ ತಜ್ಞರನ್ನು ಸಂಪರ್ಕಿಸಲು ಹೇಳಿದ್ದೇನೆ. ಅವರ ಆ ರೀತಿ ಮೂಳೆ ತಜ್ಞರನ್ನು ಸಂಪರ್ಕ ಮಾಡಿರುವುದಿಲ್ಲ ಅವರಿಗೆ ಆದ ಗಾಯಗಳು

ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಸದರಿಯವರಿಗೆ ನಾನು ಚಿಕಿತ್ಸೆ ಕೊಟ್ಟಿರುವ ಬಗ್ಗೆ ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು , ಅದನ್ನು ಈಗ ನಿಪಿ 7 ಎಂದು , ಸಾಕ್ಷಿಯ ಸಹಿಯನ್ನು ನಿಪಿ 7–ಎ ಎಂದು ಗುರುತಿಸಲಾಯಿತು. ಎಂ ಎಲ್ ಸಿ ಎಕ್ಸಾಟ್ರಾಕ್ಟನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ . ಅದನ್ನು ಈಗ ನೋಡುತ್ತಿದ್ದು , ಅದನ್ನು ಈಗ ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8–ಎ ಎಂದು ಗುರುತಿಸಲಾಯಿತು. ಒಬ್ಬ ವ್ಯಕ್ತಿಯನ್ನು ಎಳೆದಾಡಿ ಕೆಡವಿ ಕಾಲು ಕೈಯಿಂದ ಒಡೆದರೆ ಮೈಕೈ ನೋವು ಆಗುವ ಸಾಧ್ಯತೆ ಇರುತ್ತದೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಯು ಸಿ ವಕೀಲರಿಂದಃ**

ಯಾವುದೇ ಒಬ್ಬ ವ್ಯಕ್ತಿ ಆಯಾ ತಪ್ಪಿ ಬಿದ್ದರೆ ನಿಪಿ 7 ರಲ್ಲಿ ಹೇಳಿರುವ ನೋವುಗಳು ಆಗುವ ಸಾಧ್ಯತೆ ಇರುತ್ತದೆ. ಗಾಯಾಳುವಿನ ಮೈ ಮೇಲೆ ಯಾವುದೇಗಾಯಗಳು ಕಂಡು ಬಂದಿಲ್ಲ ಎಂದರೆ ಸರಿ . ಪೊಲೀಸರ ಕೋರಿಕೆಗೆ ಗಾಯದ ಪ್ರಮಾಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ರೋಗಿ ಹೇಳಿದ್ದರಿಂದ ಅವರಿಗೆ ನೋವು ಇದೆ ಎಂದು ನನಗೆ ಗೊತ್ತಾಗಿದೆ ಆದ್ದರಿಂದ ಆ ಪ್ರಕಾರ ಗಾಯದ ಪ್ರಮಾಣ ಕೊಟ್ಟಿರುತ್ತೇನೆ ಎನ್ನುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ